ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI SHIVAMOGGA
2 | ಶುಕ್ರವಾರ
21 ಅಕ್ಟೋಬರ್ 2016
21 OCTOBER 2016

# ಗೋಂದಿ ಅಣೆಕಟ್ಟೆ ರಕ್ಷಣೆ ನಮ್ಮೆಲ್ಲರ ಕರ್ತವ್ಯ

## ಡ್ಯಾಂ ಪುನರುಜ್ಜೀವನ ಕಾಮಗಾರಿ ಮಾದರಿಯಾಗಲಿ | ಇಂಜಿನಿಯರ್ ಕುಲಕರ್ಣಿ ಸಲಹೆ

**ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ**

ನೂರು ವರ್ಷಗಳ ಹಿಂದೆ ನಿರ್ಮಾಣವಾಗಿರುವ ಗೋಂದಿ ಅಣೆಕಟ್ಟೆ ನಮ್ಮ ಪೂರ್ವಜರು ನಮಗೆ ಬಿಟ್ಟುಹೋಗಿರುವ ಆಸ್ತಿ. ಅದನ್ನು ಜೋಪಾನವಾಗಿ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಕರ್ನಾಟಕ ನೀರಾವರಿ ನಿಗಮದ ಇಂಜಿನಿಯರ್ ಆರ್.ಪಿ.ಕುಲಕರ್ಣಿ ತಿಳಿಸಿದರು.



ಭದ್ರಾ ಕಾಡಾ ಸಭಾಂಗಣದಲ್ಲಿ ಗೋಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಸದಸ್ಯರಿಗೆ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಕರ್ನಾಟಕ ನೀರಾವರಿ ನಿಗಮದ ಇಂಜಿನಿಯರ್ ಆರ್.ಪಿ.ಕುಲಕರ್ಣಿ ಮಾತನಾಡಿದರು.

ನಗರದ ಹೊರವಲಯದ ಮಲವಗೊಪ್ಪದಲ್ಲಿರುವ ಭದ್ರಾ ಕಾಡಾ ಸಭಾಂಗಣದಲ್ಲಿ ಗುರುವಾರ ನೀರಾವರಿ ನಿಗಮ, ಭದ್ರ ಕಾಡಾ, ಎಸ್‌ಎಂಇಸಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಿಂದ ಗೋಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಸದಸ್ಯರಿಗೆ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.

ಏಷ್ಯಾ ಅಭಿವೃದ್ಧಿ ಬ್ಯಾಂಕಿನ 130 ಕೋಟಿ ರೂ. ಅನುದಾನದಲ್ಲಿ ಗೋಂದಿ ಅಣೆಕಟ್ಟೆಯ ಪುನರುಜ್ಜೀವನ ಕಾಮಗಾರಿ ಕೈಗೊಳ್ಳಲಾಗಿದ್ದು, ಇದನ್ನು ಮಾದರಿ ಯೋಜನೆಯನ್ನಾಗಿಸುವ ಜವಾಬ್ದಾರಿ ನೀರು ಬಳಕೆದಾರರ ಸಹಕಾರ ಸಂಘಗಳ ಮೇಲಿದೆ. ನಿಮ್ಮ ಪರಿಣಾಮಕಾರಿ ಭಾಗವಹಿಸುವಿಕೆ ಮೇಲೆ ಈ ಯೋಜನೆಯ ಯಶಸ್ಸು ನಿಂತಿದೆ ಎಂದು ಹೇಳಿದರು.

ಭದ್ರಾ ಕಾಡಾ ಆಡಳಿತಾಧಿಕಾರಿ ಅಂಬಾಡಿ ಮಾಧವ್ ಮಾತನಾಡಿ, ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಭತ್ತವನ್ನು ಹೊರತುಪಡಿಸಿ ಪರ್ಯಾಯ ಬೆಳೆಗಳಾದ ಹೂವು, ತೆಂಗು, ಹೆಸರು, ಮೆಕ್ಕೆಜೋಳ ಬೆಳೆಯಲು ರೈತರು ಮುಂದಾಗಬೇಕು. ಶ್ರೀ ಪದ್ಧತಿಯಲ್ಲಿ ಭತ್ತವನ್ನು ಕಡಿಮೆ ನೀರು ಹಾಗೂ ಕಡಿಮೆ ಖರ್ಚಿನಲ್ಲಿ ಬೆಳೆಯಬಹುದಾಗಿದೆ. ರೈತರು ಈ ದಿಕ್ಕಿನಲ್ಲಿ ಗಮನಹರಿಸಬೇಕಾಗಿದೆ ಎಂದರು.

ಯೋಜನ ಸಮಾಲೋಚಕ ಸಹಾಯ ಸಂಸ್ಥೆಯ ತಂಡದ ಉಪನಾಯಕ ಶ್ರೀನಿವಾಸ್ ಮುದ್ರಕರ್ತ ಮಾತನಾಡಿ, ಗೋಂದಿ ನೀರಾವರಿ ಕಾಲುವೆ ಸರಿಪಡಿಸಿ ಕೊಳ್ಳಲು ಇದೊಂದು ಉತ್ತಮ ಅವಕಾಶವಾಗಿದ್ದು, ಸಂಘಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಹೊಸಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ವೀರೇಶ್, ಪ್ರಗತಿಪರ ರೈತ ಕುಮಾರ್ ನಾಯ್ಕ್, ಇಂಜಿನಿಯರ್‌ಗಳಾದ ಉಮೇಶ್, ಬಸವಣ್ಣ, ವೆಂಕಟೇಶ್, ಶಂಭಯ್ಯ, ರಾಜಣ್ಣ, ನಟರಾಜ್, ರುದ್ರೇಶ್ ನಾಯಕ್, ಹರೀಶ್ ಮತ್ತಿತರರಿದ್ದರು.